ಇ) ೧೯೮೮-೮೯ನೇ ಸಾಲಿಗಾದರೂ ಡಪ್ಯುಟೇಷನ್ ಆಧಾರದ ಮೇಲೆ ಗುಮಾಸ್ತರನ್ನು ನೇಮಿಸಲಾಗುವುದೇ ?

ಈ) ಸದರಿ ಕಾಲೇಜಿನ ಉಳಿದ ಖಾಲಿ ಇರುವ ಹುದ್ದೆಗಳನ್ನು ಎಷ್ಟು ಸಮಯದೊಳಗೆ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ?

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿಗಳು) —

ಅ) ಹುದ್ದೆ ಖಾಲಿ ಇರುವುದಿಲ್ಲ.

ಆ) ಮತ್ತು (ಇ) ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ

ಈ) ಆರ್ಥಿಕ ಮಿತವ್ಯಯ ಸಡಲಿಸಿದ ನಂತರ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುವುದು.

ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯುವ ಬಗ್ಗೆ

೧೪೦೭ (೨೬೫೧) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಳ್ತಂಗಡಿ ತಾಲ್ಲೂಕಿನ ಕಳಿಯ ಕಾರ್ಯತ್ತಡ್ಕ ಕರ್ಕೆಜೆ ಅಂಡಿಂಜೆಗಳಲ್ಲಿ ಹೊಸ ಪ್ರೌಢ ಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಈ ಹಿಂದೆ ಕೇಳಿಕೊಂಡಿದ್ದರೂ ಅನುಮತಿ ನೀಡದಿರಲು ಕಾರಣವೇನು ?

ಆ) ೧೯೮೮-೮೯ನೇ ಸಾಲಿನಲ್ಲಿ ಈ ಮೇಲಿನ ಸ್ಥಳಗಳಲ್ಲಿ ಹೊಸ ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿ ನೀಡುವರೇ ?

ಇ) ಈ ಬಗ್ಗೆ ಸೂಕ್ತ ನಿರ್ದೇಶನವನ್ನು ಜಿಲ್ಲಾ ಪರಿಷತ್ತಿಗೆ ನೀಡಲಾಗುವುದೇ ?

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೧೯೮೫-೮೬ನೇ ಸಾಲಿನಿಂದ ರಾಜ್ಯದಲ್ಲಿ ಯಾವುದೇ ಸರ್ಕಾರಿ ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿ ನೀಡಿರುವುದಿಲ್ಲ.

ಆ) ಪ್ರಸ್ತಾವನೆಗಳನ್ನು ಆಯುಕ್ತರಿಂದ ತರಿಸಿ ಪರಿಶೀಲಿಸಿ ಅಗತ್ಯವೆಂಬ ಆಧಾರದ ಮೇಲೆ ಅನುಮತಿ ನೀಡಲು ಸರ್ಕಾರದ ಮಟ್ಟದಲ್ಲಿಯೇ ಕ್ರಮ ತೆಗೆದು ಕೊಳ್ಳಲು ನಿರ್ಧರಿಸಲಾಗಿದೆ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಗಂಗಾಕಲ್ಯಾಣ ಯೋಜನೆ ಬಗ್ಗೆ

೧೪೦೮ (೨೫೯೨) ಶ್ರೀ ಶರಣಬಸಪ್ಪ ಮಾಲಿ ಪಾಟೀಲ್ (ಆಳಂದ್).—ಮಾನ್ಯ ಕಂದಾಯ ಯೋಜನೆ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಗಂಗಾಕಲ್ಯಾಣ ಯೋಜನೆ ಗ್ರಾಮಗಳಿಗೆ ಮಾತ್ರ ಅನ್ವಯಿಸುತ್ತಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಆಳಂದ್ ಪಟ್ಟಣದಲ್ಲಿನ ರೈತರುಗಳ ಜಮೀನಿಗೆ ಈ ಯೋಜನೆಯನ್ನು ಅನ್ವಯಿಸಲಾಗುವುದೇ ?

ಇ) ಈ ಯೋಜನೆಯನ್ನು ಭೀಮನಗರ ಭಾಗ, ಸಲಗರ ಭಾಗ, ಹೆಬ್ಬಾಳ ಭಾಗ, ತೆರೆಕಾಣ ಭಾಗ, ಹಾಗೂ ಸಂಗೋಳಗಿ ಭಾಗದ ಪ್ರದೇಶಗಳಲ್ಲಿಯೂ ತೆಗೆದುಕೊಳ್ಳಲು ಕ್ರಮ ಕೈಗೊಳ್ಳುವರೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಯೋಜನೆಗೆ ನಿಗಧಿಪಡಿಸಿರುವ ಸೂತ್ರಗಳಿಗನುಸಾರವಾಗಿರತಕ್ಕ ಜಮೀನುಗಳಿಗೆಲ್ಲಾ ಎಲ್ಲೇ ಇದ್ದರೂ ಅನ್ವಯಿಸುತ್ತದೆ.